**<u>ದಿನಾಂಕಃ 10-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಫ್.ಎಂ.ಎಂ. ವಕೀಲರಿಂದಃ</u>**

09. 5 ನೇ ಪ್ರತಿವಾದಿ ನಾವು ಹುಟ್ಟಿಸಿಕೊಂಡ ದಾನಪತ್ರಕ್ಕೆ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸಾಕ್ಷಿ ಸದರಿ ದಾನಪತ್ರ ಹುಟ್ಟಿಸಿಕೊಂಡಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸದರಿ ದಾನಪತ್ರಕ್ಕೆ 5 ನೇ ಪ್ರತಿವಾದಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸಿದ್ದನಗೌಡ ಪಾಟೀಲ ಅಂದರೆ 3 ನೇ ಪ್ರತಿವಾದಿ ಈ ದಾವೆಯಲ್ಲಿ ಪ್ರತ್ಯೇಕವಾಗಿ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸುವ ಮೊದಲು ನಾನು ದಾವಾ ಆಸ್ತಿಗಳು ಪ್ರತಿವಾದಿಯರಿಗೆ ಯಾವ ರೀತಿ ಬಂದಿರುತ್ತವೆ ಎಂದು ದಾಖಲೆಗಳನ್ನು ನೋಡಿರುತ್ತೇನೆ. ಸರ್ವೆ ನಂ.10/1 ನ್ನು ಶಿವನಗೌಡ ಪಾಟೀಲರವರು ಶಿದ್ದಪ್ಪ ಉಜ್ಜಪ್ಪ ಬಾವಿಕಟ್ಟಿರವರಿಂದ ದಿನಾಂಕಃ14.02.1977 ರಂದು ಖರೀದಿಸಿದ್ದರು. ಸರ್ವೆ ನಂ.10/2 ನ್ನು ಬಸನಗೌಡ ಪಾಟೀಲರವರು ಉಜ್ಜಪ್ಪ ಶಿದ್ದಪ್ಪ ಬಾವಿಕಟ್ಟಿ ರವರಿಂದ ಅದೇದಿನ ಖರೀದಿಸಿರುತ್ತಾರೆ. ಈಗ ಸಾಕ್ಷಿಗೆ 3 ನೇ ಪ್ರತಿವಾದಿಯ ಮೂಲ ಪ್ರತಿವಾದ ಪತ್ರವನ್ನು ತೋರಿಸಿದ್ದು ಅದರ ಮೇಲಿರುವ ಸಹಿ 3 ನೇ ಪ್ರತಿವಾದಿಯ ಸಹಿ ಎಂದು ಸಾಕ್ಷಿ ನೋಡಿ ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಡಿ-7 ರ ಮೇಲಿರುವ ನಿಡಿ-7 ಎ ಸಹಿಯನ್ನು ತೋರಿಸಿದ್ದು ಸದರಿ ಸಹಿ ಶಿ.ಹೇ.ಪಾಟೀಲ ಎಂದು ಬರೆದಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ 3 ನೇ ಪ್ರತಿವಾದಿಯ ಪ್ರತಿವಾದ ಪತ್ರದ ಮೇಲಿರುವ ಸಹಿ ಹಾಗೂ ನಿಡಿ-7 ಎ ಸಹಿ ಬೇರೆ ಬೇರೆ ವ್ಯಕ್ತಿಗಳ ಸಹಿ ಎಂದರೆ ಸರಿಯಲ್ಲ. ಸದರಿ 3 ನೇಪ್ರತಿವಾದಿಯ ಪ್ರತಿವಾದ ಪತ್ರದಲ್ಲಿ ಮಾಡಿರುವ ಸಹಿ ಶಿ.ಬ.ಪಾಟೀಲ ಎಂದು ಇದ್ದು ನಿಡಿ-7 ಎ ಸಹಿ ಶಿ.ಹೇ.ಪಾಟೀಲ ಎಂದು ಇದೆ ಆದ್ದರಿಂದ ಸದರಿ ಸಹಿಗಳು ಬೇರೆ ಬೇರೆ ವ್ಯಕ್ತಿಗಳ ಸಹಿಗಳು ಎಂದರೆ ಸರಿಯಲ್ಲ.

10. ನಿಡಿ-7ರ ಪ್ರತಿ ಪುಟದ ಮೇಲೆ ಶಿ.ಹೇ.ಪಾಟೀಲ ಎಂದು ಮಾಡಿದ ಸಹಿ ಒಬ್ಬನೇ ವ್ಯಕ್ತಿ ಮಾಡಿದ ಸಹಿ ಎಂದರೆ ಸಾಕ್ಷಿ ದಾನಪತ್ರ ಬರೆದುಕೊಟ್ಟ ಶಿ.ಹೇ.ಪಾಟೀಲ ಹಾಗೂ ಸಾಕ್ಷಿದಾರ ಶಿ.ಹೇ.ಪಾಟೀಲ ಬೇರೆ ಬೇರೆ ವ್ಯಕ್ತಿಗಳು ಎನ್ನುತ್ತಾರೆ. ಶಿ.ಹೇ,ಪಾಟೀಲ ಎಂದು ನಿಡಿ-7 ರ ಮೇಲೆ ಸಹಿ ಮಾಡಿದ ವ್ಯಕ್ತಿಹಾಗೂ 3ನೇ ಪ್ರತಿವಾದಿಯ ಪ್ರತಿವಾದ ಪತ್ರದ ಮೇಲೆ ಶಿ.ಬ.ಪಾಟೀಲ ಎಂದು ಸಹಿ ಮಾಡಿದ ವ್ಯಕ್ತಿ ಒಬ್ಬರೇ ಎಂದರೆ ಸರಿಯಲ್ಲ. ಸದರಿ ಶಿ.ಹೇ.ಪಾಟೀಲ ಮತ್ತುಶಿ.ಬ.ಪಾಟೀಲ ಎಂದು ಮಾಡಿದ ಸಹಿಗಳು ಒಂದೇ ಶೈಲಿಯಲ್ಲಿ ಇವೆ ಎಂದರೆ ಸರಿಯಲ್ಲ. ಸದರಿ ಸಹಿಗಳು ಒಬ್ಬನೇ ವ್ಯಕ್ತಿ ಮಾಡಿರುತ್ತಾನೆ ಎಂದು ನನಗೆ ಗೊತ್ತಿದ್ದರೂ ಸಹ ಅದನ್ನು ಒಪ್ಪಿಕೊಂಡರೇ ಪ್ರತಿವಾದಿ 3 ಮತ್ತು 5ರವರಿಗೆ ತೊಂದರೆ ಆಗುತ್ತದೆ ಎಂದು ತಿಳಿದು ಸದರಿ ಸಹಿಗಳು ಬೇರೆ ಬೇರೆ ವ್ಯಕ್ತಿಗಳ ಸಹಿಗಳು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ಸದರಿ ಶಿವನಗೌಡ ಮತ್ತು ಬಸನಗೌಡ ಪಾಟೀಲರವರಿಗೆ ಒಕ್ಕಲುತನದ ಆದಾಯ ಬಿಟ್ಟು ಬೇರೆ ಆದಾಯ ಇರಲಿಲ್ಲ ಎಂದರೆ ಸಾಕ್ಷಿ ಪಾಟೀಲಕಿ ಯಿಂದ ಅವರಿಗೆ ಆದಾಯ ಇತ್ತು ಎನ್ನುತ್ತಾರೆ. 1977 ರಿಂದ ಬಸನಗೌಡ ಪಾಟೀಲರವರು ಪಾಟೀಲಕಿಯನ್ನು ಮಾಡುತ್ತಿದ್ದರು ಎಂದರೆ ಸರಿ. ಬಸನಗೌಡ ಪಾಟೀಲರವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಬಸನಗೌಡ ಪಾಟೀಲರವರು ತೀರಿಕೊಂಡ ನಂತರ ಶಿವನಗೌಡ ಪಾಟೀಲರವರು ಪಾಟಿಲಕಿಯನ್ನು ಮಾಡುತ್ತಿದ್ದರು ಎಂದರೆ ಸರಿ. ಬಸನಗೌಡ ತೀರಿಕೊಂಡ ನಂತರ ಪಾಟೀಲಕಿ ಇನಾಮ ಜಮೀನುಗಳು ಶಿವನಗೌಡನಿಗೆ ಬರುವ ಬದಲಾಗಿ ವಾರಸಾನಾತೆಯಿಂದ ಬಸನಗೌಡ ಪಾಟೀಲರವರ ಮಕ್ಕಳ ಹೆಸರಿಗೆ ದಾಖಲಾದವು ಎಂದರೆ ಸರಿಯಲ್ಲ. ಬಸನಗೌಡ ತೀರಿಕೊಂಡ ನಂತರ ಆತನ ಪಾಟೀಲಕಿ ಇನಾಮ ಜಮೀನುಗಳು ಆತನ ಮಕ್ಕಳಿಗೆ ವಾರಸಾ ಮೂಲಕ ಬಂದವು.

12. ಬಸನಗೌಡ ಪಾಟೀಲರವರಿಗೆ ವಾರಸುದಾರರು ಎಂದರೆ 2 ಜನ ಗಂಡು ಮಕ್ಕಳು ಓರ್ವ ಮಗಳು ಇದ್ದಳು. ಸದರಿ ಬಸನಗೌಡ ಪಾಟೀಲರವರಿಗೆ ಸದರಿ ಪಾಟೀಲಕಿ ಇನಾಮ ಜಮೀನುಗಳು ಯಾವ ನಮೂನೆಯ ಫಾರಂ ತುಂಬಿದ ಮೇರೆಗೆ ಬಂದಿದ್ದವು ಎಂದು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.